## 17. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸೂರನಗದ್ದೆ.

ಇದು ಸುಭಾಷ್ ನಗರ ಕ್ಲಸ್ಟರ್ ಸಾಗರ ತಾಲ್ಲೂಕಿನಲ್ಲಿದೆ. ಸಾಗರದಿಂದ ಸಾಧಾರಣವಾಗಿ 3 ಕಿ.ಮೀ. ದೂರದಲ್ಲಿ ಸೂರನಗದದ್ದೆ ಊರಿನ ಮಧ್ಯೆ ಇದೆ. ಭೀಮನೇರಿ ಗ್ರಾಮ ಪಂಚಾಯಿತಿಗೆ ಒಳಪಟ್ಟಿದೆ.

2018-19ನೇ ಸಾಲಿನಲ್ಲಿ 98 ಮಕ್ಕಳು ಓದುತ್ತಿದ್ದು, ಮಕ್ಕಳೆಲ್ಲಾ ಇತರೆ ಹಿಂದುಳಿದ ವರ್ಗದವರಾಗಿದ್ದಾರೆ. ಪೋಷಕರೆಲ್ಲಾಕೂಲಿಗೆ ಹೋಗುವವರೇ ಹೆಚ್ಚಿನವರು. ಈ ಊರಿನ ಶಾಲೆಗೆ ಸಾಧಾರಣವಾಗಿ 3 ಎಕರೆ ಜಾಗವಿದೆ. ಆದರೂ ಶಾಲೆಯ ಮುಂದೆ ಕೆಲವು ತೆಂಗಿನ ಮರಗಳನ್ನು ಬಿಟ್ಟರೆ ಯಾವುದೇ ಗಿಡಗಳಿರಲಿಲ್ಲ. ಶಾಲೆಯ ಅಂದವೇ ಕೆಟ್ಟು ಹೋಗಿತ್ತು. ಎಸ್.ಡಿ.ಎಂ.ಸಿ ಯವರಲ್ಲಿ ವಿಷಯವನ್ನು ಮುಂದಿಟ್ಟಾಗ ಗಿಡಗಳು ಎಲ್ಲಿ ಸಿಗುತ್ತವೆ? ಅದಕ್ಕೆ ಹಣ ಕೊಡುವವರು ಯಾರು? ಇತ್ಯಾದಿ ಪ್ರಶ್ನೆಗಳು ಬಂದವು. ಆ ಎಲ್ಲಾ ಸಮಸ್ಯೆಗಳನ್ನು ಬದಿಗಿಟ್ಟು ಗಿಡಗಳನ್ನು ತರಿಸಿ ಶಾಲೆಯ ಮುಂಭಾಗದಲ್ಲಿ ಹಾಕಿಸಿದಾಗ ಶಾಲೆ ತುಂಬಾ ಸುಂದರವಾಗಿ ಕಾಣುತ್ತಿದೆ.

- ಶಾಲೆಗೆ ನಾಮಫಲಕ ಇರಲಿಲ್ಲ. ಶಾಲಾ ಅನುದಾನ ಸಾಕಾಗುತ್ತಿರಲಿಲ್ಲ. ಇಲ್ಲಿಯೂ ದಾನಿಗಳನ್ನು ಹಿಡಿದು ಶಾಲೆಗೆ ಒಳ್ಳೆಯ ನಾಮಫಲಕ ಹಾಕಿಸಿದೆ.
- ಶಾಲೆಗೆ ತುಂಬಾ ಜಾಗವಿದ್ದು ಕಾಂಪೌಂಡ್ ವ್ಯವಸ್ಥೆ ಇರಲಿಲ್ಲ. ಗ್ರಾಮ ಪಂಚಾಯಿತಿಗೆ ಮೊರೆ ಹೋಗಿ ಮೇಲಿಂದ ಮೇಲೆಒತ್ತಡ ತರುವ ಮೂಲಕ ಶಾಲೆಯ ಸುತ್ತ ಕಾಂಪೌಂಡ್ ಆಗಿದೆ.
- ಶಾಲೆಗೆ, ಕಾಂಪೌಂಡ್‌ಗೆ ಸುಣ್ಣ- ಬಣ್ಣ ಮಾಡಿಸುವುದು ಸಮಸ್ಯೆಯಾಯಿತು. ಇಲ್ಲಿಯೂ ಹಣಕಾಸನ್ನು ಹೊಂದಿಸಿ ಸುಣ್ಣ- ಬಣ್ಣ ಮಾಡಿಸಿರುವುದು ಒಂದು ದೊಡ್ಡ ಹೋರಾಟವೇ ಆಗಿದೆ.
- ಕುಡಿಯುವ ನೀರು – ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ. ನಮ್ಮಲ್ಲಿ ಅನುದಾನವಿರಲಿಲ್ಲ.ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಮೇಲಿಂದ ಮೇಲೆ ಅರ್ಜಿ ನೀಡಿ ಅವರಿಗೆ ಹಲವಾರು ಬಾರಿ ಕೇಳಿಕೊಂಡಾಗ ಅಕ್ವಾಗಾರ್ಡಿನ ವ್ಯವಸ್ಥೆಯಾಗಿದೆ.
- ಶಾಲೆಯ ಮೂರು ಕೊಠಡಿಗಳ ಒಳಗಡೆ ಗೋಡೆಗಳು ಬಿರುಕು ಬಿಟ್ಟಿವೆ. ಶಾಲೆಯ ಕಾರಿಡಾರ್ ಮೆಟ್ಟಿಲು ಎಲ್ಲಾ ಹಾಳಾಗಿರುತ್ತವೆ. ಹಲವು ಬಾರಿ ಇಲಾಖೆಯ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಲಿಲ್ಲ. ಹೇಗಾದರೂ ಮಾಡಿ ಹೊಸ ಕಟ್ಟಡ ತರಲೇಬೇಕು ಎಂಬ ಆಶಾಭಾವನೆಯೊಂದಿಗೆ ಶಾಸಕರನ್ನು ಕಂಡು ಮನವಿ ನೀಡಿ ಅಲ್ಲಿಗೆ ಸುಮ್ಮನಿರದೆ ವಿಧಾನ ಸೌಧದವರೆಗೂ ನಮ್ಮ ಹೋರಾಟ ಮುಂದುವರೆದಾಗ ಈಗ 4 ಕೊಠಡಿಗಳು ಮಂಜೂರಾಗಿ ಸದ್ಯದಲ್ಲೇ ಕಟ್ಟಡದ ಕೆಲಸ ಪ್ರಾರಂಭವಾಗುತ್ತದೆ.


ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸೂರನಗದ್ದೆ,
ಸಾಗರ ತಾ.
ಜ್ಞಾನ ದೇಗುಲವಿದು ಕೈಮುಗಿದು ಒಳಗೆ ಬಾ.




G H P S S




ಪ್ರಪಂಚದ ಭೂಪಟ



